# 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

ಸಿ.ಸಿ. ಸಂಖ್ಯೆ 1258/2016

ಫಿರ್ಯಾದಿ : ಮಲ್ಲೇಗೌಡ ,
ಬಿನ್ ಲೇಟ್ ಮಹದೇವಣ್ಣ ,
ವಯಸ್ಸು ಸುಮಾರು 45 ವರ್ಷಗಳು ,
ವಾಸಃ ಗೊದ್ದನಪುರ ಗ್ರಾಮ,
ಚಿಕ್ಕಯ್ಯನಛತ್ರ ಹೋಬಳಿ ,
ನಂಜನಗೂಡು ತಾಲ್ಲೂಕು.

ವಿರುದ್ಧ

ಆರೋಪಿ : ಉಮೇಶ ,
ಬಿನ್ ಮಹಾದೇವು ,
ವಯಸ್ಸು ಸುಮಾರು 35 ವರ್ಷ ,
ವಾಸಃ ಗೊದ್ದನಪುರ ಗ್ರಾಮ,
ಚಿಕ್ಕಯ್ಯನಛತ್ರ ಹೋಬಳಿ ,
ನಂಜನಗೂಡು ತಾಲ್ಲೂಕು.

## ಆಪಾದನೆ

*ಶ್ರೀ. ಶಿವಕುಮಾರ್ ಆರ್. ಬಿ.ಎ.ಎಲ್. ಎಲ್.ಎಲ್.ಬಿ. 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ನಾನು ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ*

ಮೇಲ್ಕಂಡ ಆರೋಪಿಯಾದ ನೀವು ಮತ್ತು ಫಿರ್ಯಾದುದಾರರು ಚಿರಪರಿಚಯಸ್ಥರಾಗಿದ್ದು ಹಾಗೂ ಒಂದೇ ಗ್ರಾಮದವಾಗಿದ್ದು , ಸದರಿ ಪರಿಚಯದ ಮುಖೇನ ಪಿರ್ಯಾದುದಾರರನ್ನು ದಿಃ 3.12.2015 ರಂದು ಹಣದ ಆವಶ್ಯಕತೆಗಾಗಿ ಭೇಟಿ ಮಾಡಿ ಪಿರ್ಯಾದುದಾರರಿಂದ 5,00,000/- ರೂ ಹಣವನ್ನು ಕುಟುಂಬದ ಅವಶ್ಯಕತೆಗಾಗಿ ಕೈಸಾಲವಾಗಿ ಪಡೆದುಕೊಂಡು , ಸದರಿ ಸಾಲವನ್ನು 2 ತಿಂಗಳ ವಾಯಿದೆಯೊಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡಿರುತ್ತೀರಿ . ಸದರಿ ಸಾಲದ ಹಣವನ್ನು 2 ತಿಂಗಳಲ್ಲಿ ನೀವು ಮರುಪಾವತಿ ಮಾಡದಿದ್ದಾಗ , ಪಿರ್ಯಾದುದಾರರು ಅನೇಕ ವೇಳೆ ನಿಮ್ಮನ್ನು ಭೇಟಿ ಮಾಡಿ ಸದರಿ ಹಣವನ್ನು ವಾಪಸ್ಸು ಕೊಡುವಂತೆ ಕೇಳಿದಾಗ , ಸದರಿ ಸಾಲದ ಮರುಪಾವತಿಗಾಗಿ ಆರೋಪಿಯಾದ ನೀವು ನಿಮ್ಮ ಖಾತೆ ಹೊಂದಿರುವ ಯಾನಿಯನ್ ಬ್ಯಾಂಕ್ , ಮೈಸೂರು ಶಾಖೆಯ ಚೆಕ್ ನಂ 035538 ನ್ನು ದಿನಾಂಕಃ 24.3.2016 ರಂದು ನಮೂದಿಸಿ ರೂ 5,00,000/-

ಗಳಿಗೆ ನೀಡಿದ್ದು , ಸದರಿ ಚೆಕ್ಕನ್ನು ಬ್ಯಾಂಕ್ನಲ್ಲಿ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ತಿಳಿಸಿರುತ್ತೀರಿ. ಆರೋಪಿಯಾದ ನೀವು ಕೊಡಲ್ಪಟ್ಟ ಚೆಕ್ಕನ್ನು ನಗದೀಕರಿಸಿಕೊಳ್ಳಲು ಫಿರ್ಯಾದುದಾರರು ತಮ್ಮ ಖಾತೆ ಹೊಂದಿರುವ ಇಂಡಿಯನ್ ಓವರ್ ಸೀಸ್ ಬ್ಯಾಂಕ್ ನಂಜನಗೂಡು ಖಾತೆಯ ಮುಖೇನ ಹಾಜರ್ಪಡಿಸಲಾಗಿ ಸದರಿ ಬ್ಯಾಂಕಿನವರು ಸಾಕಷ್ಟು ಹಣ ಇಲ್ಲ ಎಂಬ ಹಿಂಬರಹದೊಂದಿಗೆ ದಿನಾಂಕ 12.4.2016 ರಂದು ನಗದೀಕೃತಗೊಳ್ಳದೆ ತಿರಸ್ಕೃತಗೊಂಡಿರುತ್ತದೆ. ತದನಂತರ ಪಿರ್ಯಾದುದಾರರು ದಿ: 20.4.2016 ರಂದು ಮೇಲ್ಕಂಡ ವಿಷಯವನ್ನು ನಮೂದಿಸಿ ನಿಮಗೆ 15 ದಿನಗಳ ಕಾಲಾವಕಾಶ ನೀಡಿ ವಕೀಲರ ಮೂಲಕ ನಿಮಗೆ ನೋಂದಾಯಿತ ಅಂಚೆಯ ಮೂಲಕ ನೋಟಿಸನ್ನು ಕಳುಹಿಸಿದ್ದು , ಈ ಸಂಬಂಧ ನೀವು ಯಾವುದೇ ಕ್ರಮ ಕೈಗೊಳ್ಳದೇ ಇದ್ದುದರಿಂದ ಆರೋಪಿಯಾದ ನೀವು ನೆಗೋಷಿಯಲ್ ಇನ್ಸ್ಟುಮೆಂಟ್ ಕಾಯ್ದೆ ಕಲಂ 138 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಜ್ಞಾಯಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಪ್ರಶ್ನೆ-1 ಈಗ ಓದಿ ಹೇಳಿದ ನಿಮ್ಮ ಮೇಲಿನ ಆಪಾದನೆಯನ್ನು ಕೇಳಿದ್ದೀರಾ?
ಉತ್ತರ ಕೇಳಿದ್ದೇನೆ

ಪ್ರಶ್ನೆ-2 ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥಾ ವಿಚಾರಣೆಯಾಗಬೇಕೋ?
ಉತ್ತರ ಒಪ್ಪುತ್ತಿಲ್ಲ.

(ಮೇಲ್ಕಂಡ ಆಪಾದನೆಯನ್ನು ಆರೋಪಿತರಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ಉತ್ತರಿಸಿದಂತೆಯೇ ಬರೆಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆಯೆಂದು ದಿನಾಂಕ: 20.4.2018 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ)

20/4/18

2 ನೇ ಹೆ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ನಂಜನಗೂಡು